# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕಾರ್ಯದರ್ಶಿ, ವಾರ್ಡ್ ಸಮಿತಿ/ಸಹಾಯಕ ಅಭಿಯಂತರರ ಕಛೇರಿ, ದಯಾನಂದನಗರ ವಾರ್ಡ್–97**

**1ನೇ ಮುಖ್ಯ ರಸ್ತೆ. ಶ್ರೀರಾಂಪುರ ಪೋಲಿಸ್ ಠಾಣೆ ಹಿಂಭಾಗ, ದಯಾನಂದನಗರ**

---

*ಸಂ: ವಾ–97/ವಾ.ಸ/ಸಭಾನಡವಳಿ–03/20–21* *ದಿ:09.11.20*

**ಸಭೆಯ ನಡವಳಿಗಳು**

ದಿನಾಂಕ: 09.11.20 ಸೋಮವಾರ ಪೂರ್ವಾಹ್ನ 11.00 ಘಂಟೆಗೆ ವಾರ್ಡ್–97 ದಯಾನಂದನಗರದ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀಮತಿ ಅಮೃತ ಸಾಯಿ ಸಮಿತಿಯ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ವಾರ್ಡ್–97 ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರಿದರು. ನಂತರ ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ದಿಗೆ ಸಂಬಂದಿಸಿದಂತೆ ಹಾಗೂ ಕೋವಿಡ್–19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಎಲ್ಲಾ ಅದೀಕಾರಿಗಳಿಗೆ ಸಹಾಯಕ ಅಭಿಯಂತರರು ಸಭೆಗೆ ಸ್ವಾಗತ ಕೋರುತ್ತಾ,ಸಭೆಯನ್ನು ಮುನ್ನಡೆಸಲಾಯಿತು.

**ಸಭೆಗೆ ಹಾಜರಿದ್ದವರು:**

1. ಶ್ರೀಮತಿ.ಅಮೃತ ಸಾಯಿ, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ ಸಮಿತಿ ಅಧ್ಯಕ್ಷರು.
2. ಶ್ರೀಮತಿ.ಅಮೃತ ಸಾಯಿ, ಕಾರ್ಯದರ್ಶಿ ಹಾಗೂ ಸಂಚಾಲಕರು.
3. ಶ್ರೀ.ಕಿರಣ್ ಕುಮಾರ್.ಹೆಚ್.ಸಿ,ಕಂದಾಯ ಪರೀವೀಕ್ಷಕರು.
4. ಶ್ರೀ.ಪ್ರಕಾಶ್.ವೈ.ವಿ, ಕಿರಿಯ ಅಭಿಯಂತರರು(ಬೆಸ್ಕಾಂ).
5. ಶ್ರೀ.ಅಶೋಕ್.ಹೆಚ್, ಕಿರಿಯ ಅಭಿಯಂತರರು(ಬೆಸ್ಕಾಂ).
6. ಶ್ರೀ.ತೋಪೇಗೌಡ, ಕಂದಾಯ ಪರಿವೀಕ್ಷಕರು(ಬಿ.ಬಿ.ಎಂ.ಪಿ)
7. ಶ್ರೀ.ಎಂ.ಹೆಚ್.ಹೆಗಡೆ, ಪೋಲೀಸ್ ಕಾನ್ಸ್ಟೇಬಲ್(ಟ್ರಾಫಿಕ್ ಪೋಲೀಸ್ ಠಾಣೆ–ಮಲ್ಲೇಶ್ವರಂ)
8. ಶ್ರೀ.ಕಿರಣ್ ಕುಮಾರ್.ಸಿ, ವಾಟರ್ ಇನ್ಸ್ಪೆಕ್ಟರ್(ಬಿ.ಡಬ್ಲ್ಯೂಎಸ್.ಎಸ್.ಬಿ)
9. ಶ್ರೀ.ಮಂಜುನಾಥ್.ಬಿ, ಕಂದಾಯ ಪರೀವೀಕ್ಷಕರು.
10. ಶ್ರೀ.ಎನ್.ವೆಂಕಟೇಶ್. ಕಿರಿಯ ಆರೋಗ್ಯ ಪರಿವೀಕ್ಷಕರು(ಘನತ್ಯಾಜ್ಯ ನಿರ್ವಹಣೆ–ಬಿಬಿಎಂಪಿ)
11. ಶ್ರೀ.ಎನ್. ಕುಮಾರ್, ಮೇಸ್ತ್ರಿ(ಘನತ್ಯಾಜ್ಯ ನಿರ್ವಹಣೆ–ಬಿಬಿಎಂಪಿ)
12. ಶ್ರೀ.ಟಿ.ಆಂಜನೇಯ, ಹಿರಿಯ ಆರೋಗ್ಯ ಪರಿವೀಕ್ಷಕರು(ಆರೋಗ್ಯ–ಬಿಬಿಎಂಪಿ)
13. ಶ್ರೀ.ಬಾಬು ಪ್ರಸಾದ್, ವಾರ್ಡ ಅಧ್ಯಕ್ಷರು
14. ಶ್ರೀ.ಕಾಂತ, ವಾರ್ಡ ನಿರ್ದೇಶಕರು

Scanned with CamScanner

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರು ಸಮುಖದಲ್ಲಿ ವಾರ್ಡ್ ಸಂ:97 ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರುತ್ತಾ ವಾರ್ಡ್ ವ್ಯಾಪ್ತಿಯ ಜಲಮಂಡಳಿ, ಬೆಸ್ಕಂ ಘನತ್ಯಾಜ್ಯ ವಿಲೇವಾರಿ, ಆರೋಗ್ಯ ಇಲಾಖೆ, ಕಂದಾಯ, ಕಾಮಗಾರಿ ಇಲಾಖೆಗಳಿಗೆ ಸಂಬಂದಿಸಿದಂತೆ ಪ್ರಸ್ತುತ ಇರುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು

1. ವಾರ್ಡ ನೋಡಲ್ ಅಧಿಕಾರಿಗಳು ವಾರ್ಡ್‌ನ ಸಮಸ್ಯೆ/ದೂರುಗಳ ಬಗ್ಗೆ ವಿಚಾರಿಸಿದಾಗ, ಶ್ರೀ.ಪ್ರಕಾಶ್.ವೈವಿ, ಕಿರಿಯ ಅಭಿಯಂತರರು(ಬೆಸ್ಕಾಂ) ಶ್ರೀರಾಂಪುರ 4ನೇ ಹಾಗೂ 5ನೇ ಅಡ್ಡರಸ್ತೆಗಳಲ್ಲಿ ವಿದ್ಯುತ್ ಸಮಸ್ಯೆ ಬಗ್ಗೆ ತಮಗೆ ದೂರುಗಳು ಬಂದಿದ್ದು ಸದರಿ ಸಮಸ್ಯೆಯನ್ನು 3ದಿನಗಳಲ್ಲಿ ಸರಿಪಡಿಸುವುದಾಗಿ ತಿಳಿಸಿದರು.
2. ಶ್ರೀ.ಅಶೋಕ್.ಹೆಚ್, ಕಿರಿಯ ಅಭಿಯಂತರರು(ಬೆಸ್ಕಾಂ) ರವರು ಮಾತಾಡಿ ವಾರ್ಡ ವ್ಯಾಪ್ತಿಯಲ್ಲಿ ಹೊಸದಾಗಿ ಎರಡು ಟ್ರಾನ್ಸಫರ್‌ಮರ್‌ಗಳನ್ನು ಅಳವಡಿಸಲು ಈಗಾಗಲೇ ಅನುಮೋದನೆಯಾಗಿದ್ದು, ಅಳವಡಿಸಲು ಸ್ಥಳದ ಸಮಸ್ಯೆ ಇರುವುದಾಗಿ ತಿಳಿಸಿದರು.

   ಅದಕ್ಕಾಗಿ ವಾರ್ಡ ಸಹಾಯಕ ಅಭೀಯಂತರರು ಎರಡು ಇಲಾಖೆಗಳ ಅಧಿಕಾರಿಗಳು ಜಂಟಿಯಾಗಿ ಸ್ಥಳ ತಪಾಸಣೆ ಮಾಡಿ ಸದರಿ ಸಮಸ್ಯೆ ಸರಿಪಡಿಸುವುದಾಗಿ ತಿಳಿಸಿದರು.
3. ಶ್ರೀ.ಬಾಬು ಪ್ರಸಾದ್, ವಾರ್ಡ ಅಧ್ಯಕ್ಷರು ಮಾತಾಡಿ 6ನೇ ಅಡ್ಡರಸ್ತೆ, ಆರ್.ಜೆ.ಐ ಕಾಲೋನಿಯಲ್ಲಿ ಒಳ ಚರಂಡಿ ಪೈಪ್ ಹಾಳಾಗಿ ಸದರಿ ರಸ್ತೆಯ ಮನೆಗಳು ಸಂಪ್ಗಳಿಗೆ ಸ್ಯಾನಿಟರಿ ನೀರು ಹರಿಯುತ್ತಿರುವ ಬಗ್ಗೆ ತಿಳಿಸಿದರು.

   ಅದಕ್ಕಾಗಿ ಶ್ರೀ.ಕಿರಣ್ ಕುಮಾರ್.ಸಿ, ವಾಟರ್ ಇನ್ಸ್ಪೆಕ್ಟರ್(ಬಿ.ಡಬ್ಲ್ಯೂಎಸ್.ಎಸ್.ಬಿ) ರವರು 5ದಿನಗಳಲ್ಲಿ ಹೊಸ ಪೈಪ್ ಲೈನ್ ಕೆಲಸ ನಿರ್ವಹಿಸುವುದಾಗಿ ತಿಳಿಸಿದರು.
4. ಶ್ರೀ.ಬಾಬು ಪ್ರಸಾದ್, ವಾರ್ಡ ಅಧ್ಯಕ್ಷರು ಮಾತಾಡಿ ಸ್ಯಾನಿಟರಿ ತೆರಿಗೆಯನ್ನು ಹೆಚ್ಚಾಗಿ ಬಿಲ್‌ಗಳಲ್ಲಿ ಹಾಕುತ್ತಿರುವುದಾಗಿ ತಿಳಿಸಿದರು.

   ಅದಕ್ಕಾಗಿ ಶ್ರೀ.ಕಿರಣ್ ಕುಮಾರ್.ಸಿ, ವಾಟರ್ ಇನ್ಸ್ಪೆಕ್ಟರ್(ಬಿ.ಡಬ್ಲ್ಯೂಎಸ್.ಎಸ್.ಬಿ) ರವರ ಮೇಲಾಧಿಕಾರಿಗಳ ಆದೇಶದ ಮೇರೆಗೆ ತೆರಿಗೆತನ್ನು ಕಾಕುತ್ತಿರುವುದಾಗಿ ತಿಳಿಸಿದ್ದು, ಸದರಿ ಆದೇಶದ ಪ್ರತಿಯನ್ನು ನೀಡುವುದಾಗಿ ತಿಳಿಸಿದರು.
5. ಶ್ರೀ.ಎಂ.ಹೆಚ್.ಹೆಗಡೆ, ಪೋಲೀಸ್ ಕಾನ್ಸ್ಟೇಬಲ್(ಟ್ರಾಫಿಕ್ ಪೋಲೀಸ್ ಠಾಣೆ–ಮಲ್ಲೇಶ್ವರಂ) ರವರು ಬಿ.ಡಬ್ಲ್ಯೂಎಸ್.ಎಸ್.ಬಿ ಇಲಾಖೆಯವರು ಅನುಮತಿ ಪತ್ರ ಪಡೆಯದೆ ರಸ್ತೆಗಳನ್ನು ಅಗೆಯುತ್ತಿರುವುದಾಗಿ ತಿಳಿಸಿದ್ದು, ವಾರ್ಡ್ ನೋಡಲ್ ಅಧಿಕಾರಿಗಳು ಬಿಬಿಎಂಪಿ ಇಂದ ಅನುಮತಿ ಪಡೆದ ನಂತರ ರಸ್ತೆ ಅಗೆಯುವುದಾಗಿ ಸೂಚಿಸಿದರು
6. ಶ್ರೀ.ಎಂ.ಹೆಚ್.ಹೆಗಡೆ, ಪೋಲೀಸ್ ಕಾನ್ಸ್ಟೇಬಲ್(ಟ್ರಾಫಿಕ್ ಪೋಲೀಸ್ ಠಾಣೆ–ಮಲ್ಲೇಶ್ವರಂ) ರವರು ವಾರ್ಡ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳು ಹೆಚ್ಚಾಗಿರುವುದಾಗಿ ತಿಳಿಸಿದ್ದು, ವಾರ್ಡ ಸಹಾಯಕ ಅಭಿಯಂತರರು ಎರಡು ದಿನಗಳಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವುದಾಗಿ ತಿಳಿಸಿದರು.

Scanned with CamScanner

7. ಶ್ರೀ.ಎನ್. ಕುಮಾರ್, ಮೇಸ್ತ್ರಿ(ಘನತ್ಯಾಜ್ಯ ನಿರ್ವಹಣೆ-ಬಿಬಿಎಂಪಿ) ರವರು ಬಿ.ಡಬ್ಲ್ಯೂಎಸ್.ಎಸ್.ಬಿ ಇಲಾಖೆಯವರು ಮ್ಯಾನ್ ಹೋಲ್‌ಗಳಿಂದ ತೆಗೆದ ಹೂಳನ್ನು ಅಲ್ಲಲ್ಲೆ ಬಿಟ್ಟಿರುವುದಾಗಿ ದೂರು ನೀಡಿದ್ದು, ಸದರಿ ಹೂಳನ್ನು ತೆಗೆಸಲು ಬಿಬಿಎಂಪಿ ಕಾಮಗಾರಿ ಅಧಿಕಾರಿಗಳಿಗೆ ಸೂಚಿಸಲಾಯಿತು.
8. ಶ್ರೀ.ಬಾಬು ಪ್ರಸಾದ್, ವಾರ್ಡ ಅಧ್ಯಕ್ಷರು ವಾರ್ಡ ವ್ಯಾಪ್ತಿಯಲ್ಲಿ ಇನ್ನು ಹಲವು ಕಡೆ ಮಣ್ಣು ಇರುವುದಾಗಿ ತಿಳಿಸಿದ್ದು, ಸಹಾಯಕ ಅಭಿಯಂತರರು ಟ್ರ್ಯಾಕ್ಟರ್ ನಲ್ಲಿ ತೆಗೆಸುವುದಾಗಿ ತಿಳಿಸಿದರು.
9. ಶ್ರೀ.ಬಾಬು ಪ್ರಸಾದ್, ವಾರ್ಡ ಅಧ್ಯಕ್ಷರು ವಾರ್ಡ ವ್ಯಾಪ್ತಿಯಲ್ಲಿ ಹಲವು ಮಳಿಗೆಗಳಲ್ಲಿ ಮಾಸ್ಕ ದರಿಸದೆ ವ್ಯಾಪರ ಮಾಡುತ್ತಿರುವುದಾಗಿ ತಿಳಿಸಿದ್ದು, ಬಿಬಿಎಂಪಿ ಮಾರ್ಷಲ್ ರವರು ಸಭೆಗೆ ಹಾಜರಾಗದ ಕಾರಣ ದೂರವಾಣಿ ಮುಖಾಂತರ ಸದರಿಯವರಿಗೆ ವ್ಯಾಪರ ಮಳಿಗೆಯ ಮಾಲೀಕರಿಗೆ ದಂಡ ವಿಧಿಸುವುದಾಗಿ ತಿಳಿಸಲಾಯಿತು. ಹಾಗೂ ವಾರ್ಡ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ದಿನ ನಿತ್ಯ ವಾರ್ಡ ವ್ಯಾಪ್ತಿಯಲ್ಲಿ ಮಾಸ್ಕ ದರಿಸದೆ ಇರುವವರನ್ನು ಗುರುತಿಸಿ ದಂಡ ವಿಧಿಸಲು ಸೂಚಿಸಲಾಯಿತು.
10. ವಾರ್ಡ ಸಹಾಯಕ ಅಭಿಯಂತರರು 7ನೇ ಮುಖ್ಯ ರಸ್ತೆ, ಶ್ರೀರಾಂಪುರ, ಅಂಬೇಡ್ಕರ್ ಡೇ ಕೇರ್ ಸೆಂಟರ್ ಎದುರು ನಿಲ್ಲಿಸಿರುವ ಗಾಡಿಗಳನ್ನು ತೆಗೆಸುವುದಾಗಿ ಶ್ರೀ.ಎಂ.ಹೆಚ್.ಹೆಗಡೆ, ಪೋಲೀಸ್ ಕಾನ್ಸ್ಟೇಬಲ್(ಟ್ರಾಫಿಕ್ ಪೋಲೀಸ್ ಠಾಣೆ-ಮಲ್ಲೇಶ್ವರಂ)
11. ನೋಡಲ್ ಅಧಿಕಾರಿಗಳು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕಸವನ್ನು ವಿಂಗಡಿಸಿ ನೀಡಲು ಸಾರ್ವಜನಿಕರಿಗೆ ಅರಿವು ಮೂಡಿಸಲು ತಿಳಿಸಿ, ವಿಂಗಡಿಸಿದ ಕಸವನ್ನು ಮಾತ್ರ ಮನೆ ಮನೆಯಿಂದ ಪಡೆಯಲು ಸೂಚಿಸಿದರು.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೋಳ್ಳಲು ಸೂಚಿಸಿ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕರಿಗಳು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಸಭೆ ಮುಕ್ತಾಯದ ನಂತರ ನೋಡಲ್ ಅಧಿಕಾರಿಗಳು ಹಾಗೂ ಶ್ರೀ.ಬಾಬು ಪ್ರಸಾದ್, ವಾರ್ಡ ಅಧ್ಯಕ್ಷರು ಮತ್ತು ಶ್ರೀ.ಕಿರಣ್ ಕುಮಾರ್.ಸಿ, ವಾಟರ್ ಇನ್ಸ್ಪೆಕ್ಟರ್(ಬಿ.ಡಬ್ಲ್ಯೂಎಸ್.ಎಸ್.ಬಿ) ರವರು ಕ್ರಮ ಸಂಖ್ಯೆ (3) ರಲ್ಲಿ ತಿಳಿಸಿರುವ ಸ್ಥಳದ ತಪಾಸಣೆ ಮಾಡಿ ತುರ್ತಾಗಿ ಸಮಸ್ಯೆಯನ್ನು ಬಗೆಹರಿಸುವುದಾಗಿ ತಿಳಿಸಿದರು.

ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ವಾರ್ಡ ಸಂ-97

ಪ್ರತಿಯನ್ನು:

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಾಗಹನೆಗೆ ಸಲ್ಲಿಸಿದೆ.
3. ವಲಯ ಆಯುಕ್ತರು (ಪಶ್ಚಿಮ) ರವರ ಅವಾಗಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಪಶ್ಚಿಮ) ರವರ ಅವಾಗಹನೆಗೆ ಸಲ್ಲಿಸಿದೆ.
5. ನೋಡಲ್ ಅಧಿಕಾರಿಗಳು ಹಾಗೂ ವಾರ್ಡ ಸಮಿತಿ ಅಧ್ಯಕ್ಷರು ರವರ ಅವಾಗಹನೆಗೆ ಸಲ್ಲಿಸಿದೆ.
6. ಕಛೇರಿ ಕಡತಕ್ಕೆ

Scanned with CamScanner